International Journal of Kannada Research
www.kannadajournal.com

ISSN: 2454–5813
IJKR 2021; 7(4): 187-190
© 2021 IJKR
www.kannadajournal.com
Received: 22-08-2021
Accepted: 24-09-2021

**ಪ್ರತಿಮಾ ಕೆ ಪಿ**
ಸಹಾಯಕ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು,
ಮದ್ದೂರು.

Corresponding Author:
**ಪ್ರತಿಮಾ ಕೆ ಪಿ**
ಸಹಾಯಕ ಪ್ರಾಧ್ಯಾಪಕರು
ಮಹಿಳಾ ಸರ್ಕಾರಿ ಕಾಲೇಜು,
ಮದ್ದೂರು.

# ವೈಶಾಖ ಕಾದಂಬರಿಯಲ್ಲಿ ವರ್ಣ ಸಂಘರ್ಷ

**ಪ್ರತಿಮಾ ಕೆ ಪಿ**

ಕನ್ನಡ ಸಾರಸ್ವತ ಲೋಕದಲ್ಲಿ ಚದುರಂಗ ಎಂದೇ ಅಪಾರ ಖ್ಯಾತಿಯನ್ನು ಪಡೆದುಕೊಂಡವರು ಎಂ. ಸುಬ್ರಹ್ಮಣ್ಯರಾಜೇ ಅರಸು. ಶ್ರೀಯುತರು 1916 ಜನವರಿ ಒಂದರಂದು ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ ಜನಿಸಿದರು. 1948ರಿಂದ ಆರಂಭವಾದ ಸಾಹಿತ್ಯ ಕೃಷಿಯಲ್ಲಿ ಪ್ರಮುಖವಾಗಿ ಸರ್ವಮಂಗಳ, ಉಯ್ಯಾಲೆ, ವೈಶಾಖ, ಹೆಜ್ಜಾಲ ಕಾದಂಬರಿಗಳು, ಸತ್ಯದ ಝೋಕು, ಕುಮಾರರಾಮ, ಇಲಿಬೋನು, ಬಿಂಬ ನಾಟಕಗಳೂ, ಸ್ವಪ್ನಸುಂದರಿ, ಶವದ ಮನೆ, ಇಣಕುನೋಟ, ಬಂಗಾರದ ಹೆಜ್ಜೆ, ಕ್ವಾಟೆ, ಮೃಗಯಾ ಕಥಾ ಸಂಕಲನಗಳು ಕೂಡಿವೆ.

ಕನ್ನಡದ ಶ್ರೇಷ್ಠ ಕಾದಂಬರಿಗಳ ಸಾಲಿಗೆ ಸೇರುವ, ಕನ್ನಡದಲ್ಲಿ ಬಹಳಷ್ಟು ವಿಚಾರ ವಿಮರ್ಶೆಗೆ ಒಳಗಾಗಿರುವ ಮಹತ್ವದ ಪ್ರಾದೇಶಿಕ, ಸಾಮಾಜಿಕ ಕಾವೇರಿ, ಲಕ್ಷ್ಮಣತೀರ್ಥಗಳ ನಡುವಣ ಪ್ರದೇಶದ ಗ್ರಾಮಜೀವನವನ್ನು ಹೆಚ್ಚಾಗಿ ಗ್ರಾಮ್ಯ ನುಡಿಗಟ್ಟಿನಲ್ಲಿಯೇ ಕಟ್ಟಿಕೊಡುವ ಕೃತಿ ವೈಶಾಖ. ದಟ್ಟವಾದ ಅನುಭವ ಸಾಮಗ್ರಿ ಮತ್ತು ವಿಶಿಷ್ಟ ತಂತ್ರಗಳಿಂದ ಕೂಡಿರುವ ಇದು ಲೇಖಕರ ಮಹಾತ್ವಾಕಾಂಷೆಯ ಕೃತಿ ಕೂಡ. ಕಥೆಯನ್ನು ನಿರೂಪಕರು ಹೇಳುವುದಿಲ್ಲ.ಸಾಂಪ್ರದಾಯಿಕ ವ್ಯವಸ್ಥೆಯ ಭಾರಕ್ಕೆ ಕುಸಿಯುತ್ತಿರುವ ಹೆಣ್ಣು ಮತ್ತು ಹರಿಜನರು ಪಡುವ ಪಾಡು ಇಲ್ಲಿ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ. ಕಾದಂಬರಿಯ ಎರಡು ಮುಖ್ಯ ಪಾತ್ರಗಳಾದ ಲಕ್ಕ ಮತ್ತು ರುಕ್ಮಿಣಿಯರ ಮೂಲಕ ಕತೆ ಸಾಗುತ್ತದೆ. ಈ ಎರಡು ಪಾತ್ರಗಳ ಅನುಭವ ಮತ್ತು ನೆನಪುಗಳ ಮೂಲಕ ನಾವು ಘಟನೆಗಳನ್ನು ಕಂಡುಕೊಳ್ಳುತ್ತೇವೆ. ಮಹಿಳೆ ಮತ್ತು ಶೋಷಿತರ ಬಗೆಗೆ ಅನುಕಂಪ ಹೊಂದಿರುವ ಕಾದಂಬರಿ ಹರಿಜನರ ಜೀವನ ಮತ್ತು ಹೆಣ್ಣಿನ ಬಗೆಗಿನ ಅನುಕಂಪವನ್ನು ಮೂರ್ತ ರೂಪದಲ್ಲಿ ತೆರೆದಿಡುತ್ತದೆ. ಈ ಪುಸ್ತಕದ ಬೆನ್ನುಡಿಯಲ್ಲಿ ಕುವೆಂಪುರವರು ತಿಳಿಸಿದಂತೆ. ‘ಇದು ರುದ್ರವಾಸ್ತವವೇ. ಮಲೆಗಳಲ್ಲಿ ಮದುಮಗಳು ಕಾದಂಬರಿ ತರಹ ಹಳ್ಳಿಯ ಚಿತ್ರಣ ನಮ್ಮ ಮುಂದೆ ನಿಲ್ಲಿಸುವ ಈ ಕೃತಿ ಓದಿಸಿಕೊಂಡು ಹೋಗುವ ಗುಣ ಹೊಂದಿದೆ. ಗ್ರಾಮೀಣ ಪರಿಸರದ ಸಂಕೀರ್ಣ ಕಾದಂಬರಿಯಾಗಿದೆ.’

ದರುಮನಹಳ್ಳಿ ಈ ಕಾದಂಬರಿಯ ಕೇಂದ್ರ ಬಿಂದು. ಹಳ್ಳಿಯೊಳಗಿನ ಜಾತಿಕಲಹ, ಪಂಚಾಯ್ತಿ, ರಾಜಕೀಯ, ದ್ವೇಷ, ವಂಚನೆ, ಅಸೂಯೆ, ಪ್ರೀತಿ, ಕಾಮ ಧಾರ್ಮಿಕತೆ, ಸಂಪ್ರದಾಯ, ಪ್ಲೇಗ್‌ರೋಗ, ಮುಗ್ಧತೆ ಎಲ್ಲವೂ ಕಾದಂಬರಿಯಲ್ಲಿ ಕಾಣಸಿಗುತ್ತದೆ. ಜೊತೆಗೆ ಇಲ್ಲಿರುವ ಪಾತ್ರಗಳು

ಅನೇಕ ಮತ್ತು ವೈವಿಧ್ಯಪೂರ್ಣವಾಗಿವೆ. ಲಕ್ಕ, ಕೃಷ್ಣಾಶಾಸ್ತ್ರಿ, ರುಕ್ಮಿಣಿ, ನಂಜೇಗೌಡ, ವೆಂಕಟಜೋಯಿಸ, ಕಲ್ಯಾಣಿ, ಕೇಶವಯ್ಯ, ನಂಜೇಗೌಡ, ಸರಸಿ, ದ್ಯಾವಾಜಮ್ಮ, ಮರಿಶೆಟ್ಟಿ, ಜವನಿ, ಗೋಸೆಸಾಬು....... ಅದರಲ್ಲೂ ವೈಶಾಖ ಕೃತಿಯ ಕೇಂದ್ರ ಬಿಂದುಗಳಾದ ಲಕ್ಕ ಮತ್ತು ರುಕ್ಮಿಣಿ ಹೊಲೆಯ ಮತ್ತು ಬ್ರಾಹ್ಮಣ ಜಾತಿಯ ವೈಯಕ್ತಿಕ ಸಾಮಾಜಿಕ ಚಲನಶೀಲತೆಯನ್ನು ಧ್ವನಿಸುವ ಪಾತ್ರಗಳು.

ಕಥಾವಸ್ತುವಿನ ಆಧಾರದ ಮೇಲೆ ಕಾದಂಬರಿಯ ಭಾಗವನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು.

- ಕಾಣೆಯಾದ ರುಕ್ಮಿಣಿಯೊಂದಿಗೆ ತೆರೆದುಕೊಳ್ಳುವ ದರುಮನಹಳ್ಳಿಯ ಸ್ಥಿತಿ ಮತ್ತು ಕೃಷ್ಣಾಶಾಸ್ತ್ರಿಗಳ ಬದುಕಿನಲ್ಲಾಗುವ ಬದಲಾವಣೆ.
- ದರುಮನಹಳ್ಳಿ, ಪ್ಲೇಗಿನ ಸಾಂಕ್ರಾಮಿಕ ಕಾಯಿಲೆಗೆ ಒಳಗಾಗುವುದು ಮತ್ತು ಹಳ್ಳಿಯಲ್ಲಿರುವ ಬದಲಾವಣೆಗಳಿಗೆ ರುಕ್ಮಿಣಿಯ ಶೋಕವೇ ಕಾರಣ ಎಂಬ ನಂಬಿಕೆ
- ಬಹಿಷ್ಕಾರದ ಶಿಕ್ಷೆಗೆ ಒಳಗಾಗುವ ಲಕ್ಕನ ಜೀವನ ಮತ್ತು ತಾಯಿಯೊಂದಿಗಿನ ಕಲ್ಯಾಣಿಯ ಮಾತೃಪ್ರೇಮ.

ಕೃಷ್ಣಶಾಸ್ತ್ರಿಗಳ ಸೊಸೆ ರುಕ್ಮಿಣಿ ಮಾವನಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದವಳು. ಲಕ್ಕನ ಜೊತೆಯಲ್ಲಿ ತನ್ನಕ್ಕನ ಮನೆಗೆ ಹೋಗುವಾಗ ಆದ ಲೈಂಗಿಕ ಸಂಬಂಧದ ಪರಿಣಾಮ ಗರ್ಭವತಿಯಾಗುತ್ತಾಳೆ. ಗರ್ಭ ಇಳಿಸಲು ಲಕ್ಕನನ್ನು ಔಷಧಿ ತರಲು ಕಳುಹಿಸುವಾಗ ಸಿಕ್ಕಿಕೊಳ್ಳುವ ಲಕ್ಕ ಪಂಚಾಯ್ತಿ ಎದುರಿಸಬೇಕಾಗುತ್ತದೆ. ಏಕಮುಖ ನ್ಯಾಯ ವ್ಯವಸ್ಥೆಯ ಪಂಚಾಯ್ತಿಯಲ್ಲಿ ಲಕ್ಕನಿಗೆ ಛಡಿ ಏಟು ಮತ್ತು ಗ್ರಾಮ ಬಹಿಷ್ಕಾರ ಶಿಕ್ಷೆ ನೀಡಿದರೆ. ರುಕ್ಮಿಣಿಗೆ ಘಟಸ್ಫೋಟ ಮಾಡಿ, ಮಂಡೆ ಬೋಳಿಸಿ ಕತ್ತೆಯ ಮೇಲೆ ಕೂರಿಸಿ ಊರು ಬಿಟ್ಟು ಓಡಿಸಬೇಕು... ಬ್ರಾಹ್ಮಣ ಸಮುದಾಯದ ಮಾನವನ್ನು ಕಳೆದಿರುವುದರಿಂದ ಅವಳಿಗೆ ಇದೇ ತಕ್ಕ ಶಿಕ್ಷೆ ಎಂದು ನಿರ್ಧರಿಸುತ್ತಾರೆ. ತಮ್ಮ ತಪ್ಪನ್ನು ಒಪ್ಪಿಕೊಳ್ಳಲು ಬಂದ ಕೃಷ್ಣಾಶಾಸ್ತ್ರಿಗಳಿಗೆ ಹುಚ್ಚು ಹಿಡಿದಿದೆ ಎಂದು, ಬುದ್ಧಿಭ್ರಮಣೆ ಎಂದು ಅವರನ್ನು ಸಮಾಧಾನಿಸುವರೇ ವಿನಃ ಅವರ ನುಡಿಯನ್ನು ಬ್ರಾಹ್ಮಣ ಸುಮದಾಯ ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಮರುದಿನ ಘಟಶ್ರಾದ್ಧ ಮಾಡಲು ಬ್ರಾಹ್ಮಣರು ಬರುವ ಮೊದಲೇ ರುಕ್ಮಿಣಿ ಕಾಣೆಯಾಗುತ್ತಾಳೆ. ಕಾದಂಬರಿಯಲ್ಲಿ ಕೊನೆಯವರೆಗೂ ಆಕೆಯ ಬಗ್ಗೆ ಸುಳಿವು ಸಿಗುವುದಿಲ್ಲ. ರುಕ್ಮಿಣಿ ಅಸಹಜವಾಗಿ ಕಣ್ಮರೆಯಾಗುತ್ತಾಳೆ. ಕಾದಂಬರಿಯಲ್ಲಿ ರುಕ್ಮಿಣಿ ಪಂಚಾಯ್ತಿಯ ಆದೇಶಕ್ಕೆ ಹೆದರಿ ಅಸಹಜವಾಗಿ ಕಣ್ಮರೆಯಾಗುತ್ತಾಳೆ. ಇಲ್ಲಿ ನಮ್ಮನ್ನು ಕಾಡುವ ಪ್ರಶ್ನೆ ರುಕ್ಮಿಣಿ ಬದುಕುವ ಸಾಧ್ಯತೆಗಳನ್ನು ಕಾದಂಬರಿ ಯಾಕೆ ಶೋಧಿಸುವುದಿಲ್ಲ ಎಂಬುದು. ಆದರೆ ಸಕೇಶಿ ವಿಧವೆಯಾದ ರುಕ್ಮಿಣಿಯನ್ನು ಪುರುಷ ಪ್ರಧಾನ ಸಮಾಜ ರುಕ್ಮಿಣಿಗೆ ತನ್ನ ಸ್ವಂತಿಕೆಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುವುದಿಲ್ಲ ಇಂಥ ಸಂದರ್ಭದಲ್ಲಿ ಬದುಕನ್ನು ತೊರೆಯುವುದೇ ಅವಳು ವ್ಯವಸ್ಥೆಗೆ ತೋರಿದ ಪ್ರತಿಭಟನೆಯಾಗುತ್ತದೆ.

ಊರಿನಲ್ಲಿ ರುಕ್ಮಿಣಿ ಕಾಣೆಯಾದ ನಂತರ ಅಮವಾಸ್ಯೆ ರಾತ್ರಿ ಯಾರಿಗೋ ಚಿತ್ರ ಮೂಲನ ಕೋಟೆಯ ದಿಕ್ಕಿನಿಂದ ಶೋಕಿಸುವ ದನಿ ಕೇಳ ಬಂದು, ಅದು ಬಾಯಿಂದ ಬಾಯಿಗೆ ಹರಡಿ ಊರ ತುಂಬಾ ವ್ಯಾಪಿಸುತ್ತದೆ. ರುಕ್ಮಿಣಿ ಅಲ್ಲೇ ಹೋಗಿ ಸತ್ತಿದ್ದು ಗೋಳಿನ ರಾಗ ಅವಳದೇ ಎಂಬ ನಂಬಿಕೆಗೆ ಹಳ್ಳಿಯ ಮಂದಿ ಬರುತ್ತಾರೆ. ಆದರೆ ತಿಳವಳಿಕೆಯುಳ್ಳ ಕೆಲವರು ಅದು ನರಿ ಊಳಿಡುವ ಶಬ್ಧ ಎಂದರೂ, ಕಾಲಕ್ರಮೇಣ ತಮ್ಮ ಅಭಿಪ್ರಾಯ ತಪ್ಪೆಂದು ಹಳ್ಳಿಗರ ಸಾರ್ವತ್ರಿಕ ಅಭಿಪ್ರಾಯಕ್ಕೆ ಬದ್ದರಾಗುತ್ತಾರೆ. ಜೊತೆಗೆ ನಿರಪರಾಧಿ ರುಕ್ಮಿಣಿಗೆ ಅನ್ಯಾಯವಾಗಿದ್ದು, ಗರ್ಭಿಣಿ ಮಹಿಳೆ ಸಾವಿನ ದೋಷ ಊರನ್ನು, ಸುಮ್ಮನೆ ಬಿಡುವುದಿಲ್ಲ ಎಂಬ ಅವರ ನಂಬಿಕೆಗೆ ಪೂರಕವಾಗಿ ಊರಿಗೆ ಪ್ಲೇಗುಮಾರಿ ಅವತರಿಸುತ್ತದೆ. ನಿಧಾನವಾಗಿ ಹೆಣಗಳು ಉರುಳಲು ಆರಂಭವಾಗುತ್ತವೆ. ಇದರಿಂದ ಹಳ್ಳಿಯ ಮಂದಿಯು ರುಕ್ಮಿಣಿಗೆ ಅನ್ಯಾಯವಾದ್ದರಿಂದಲೇ ಊರಿಗೆ ಕೆಡಕಾಗುತ್ತಿದೆ ಎಂದು ಬ್ರಾಹ್ಮಣ ಸಮುದಾಯದ ವಿರುದ್ಧ ತಿರುಗಿ ಬೀಳುತ್ತಾರೆ. ಬ್ರಾಹ್ಮಣರ ವರ್ತನೆಯ ಬಗ್ಗೆ ಜನರಲ್ಲಿ ವಿರೋಧ ವ್ಯಕ್ತವಾಗತೊಡಗುತ್ತದೆ. ಹಳ್ಳಿಗರ ಕೋಪಕ್ಕೆ ಹೆದರಿದ ಮತ್ತು ಕೇಶವಯ್ಯನಿಗೆ ಬೀಳುವ ಕೆಟ್ಟ ಕನಸಿನ ಭಯದಿಂದ ಬ್ರಾಹ್ಮಣ ಸಮುದಾಯವು ಅನಾಥ ಪ್ರೇತಸಂಸ್ಕಾರ ಮಾಡುತ್ತಾರೆ.

ಇದ್ಯಾವುದೂ ದರುಮನಹಳ್ಳಿಗೆ ಬಂದ ಪ್ಲೇಗು ಜಾಡ್ಯದ ಮೇಲೆ ಯಾವ ಪ್ರಭಾವವನ್ನು ಬೀರದ ಪರಿಣಾಮ, ಮಠದಲ್ಲಿ ಎಲ್ಲಾ ಜಾತಿಯ ಮುಖಂಡರು ಸಭೆ ಸೇರಿ ಊರಿನಲ್ಲಿ ಯಾರೂ ಎಣ್ಣೆಯ ಕಂಟು, ಮೆಣಸಿನ ಕಾಯಿ ಘಾಟು ಹಾಕಬಾರದೆಂದು ನಿರ್ಣಯಿಸಿದರೂ, ಅದು ಹೆಚ್ಚು ಕಾಲ ನಿಲ್ಲುವುದಿಲ್ಲ. ಊರಿನಲ್ಲಿ ಬೀಳುವ ಹೆಣಗಳ ಸಂಖ್ಯೆ ಹೆಚ್ಚಾದಾಗ ಜನರು ಗೋಮಾಳ.

ತಮ್ಮ ಹೊಲಗಳಲ್ಲಿ ಗುಡ್ಡಗಳನ್ನು ನಿರ್ಮಿಸಿ ತೆರಳುತ್ತಾರೆ. ಕೆಲವರು ಮಾತ್ರ ಊರಿನಲ್ಲಿಯೇ ಉಳಿದುಕೊಳ್ಳುತ್ತಾರೆ. ಹೀಗೆ ಕಾದಂಬರಿಯಲ್ಲಿ ಅಂದಿನ ಕಾಲದ ಸಾಂಕ್ರಾಮಿಕ ಜಾಡ್ಯ ಪ್ಲೇಗಿನ ವಿವರಗಳನ್ನು ಲೇಖಕರು ಕಥೆಯ ಭಾಗವಾಗಿ ದಾಖಲಿಸುತ್ತಾರೆ.

ಕಾದಂಬರಿಯ ಪ್ರಮುಖ ಭಾಗವಾದ ಲಕ್ಕನಲ್ಲಿ ಅರ್ಥಪೂರ್ಣವಾದ ಸಾಮಾಜಿಕ ಬಂಡಾಯದ ಹೊಳಹುಗಳು ಕಾದಂಬರಿಯ ಆರಂಭದಿಂದಲೇ ಸಿಗುತ್ತವೆ. ಗಂಗಪ್ಪನಲ್ಲಿ ಜೀತಕ್ಕಿದ್ದ ಲಕ್ಕ. ಆತನ ಗೋಳು ತಡೆಯಲಾರದೆ ಹಿಂದಕ್ಕೆ ಬಂದುಬಿಡುತ್ತಾನೆ. ಪಂಚಾಯ್ತಿಯಲ್ಲಿ ಚೌಕಾಸಿ ಮಾಡಿ ಕ್ವಾಟೆ ಬುಳ್ಳಪ್ಪ ಲಕ್ಕನನ್ನು ಜೀತಕ್ಕರಿಸಿಕೊಳ್ಳುತ್ತಾನೆ. ಇವರಿಬ್ಬರ ಜಿದ್ದು ಲಕ್ಕನಿಗೆ ಅಪಾಯ ತರುತ್ತದೆ. "ನ್ಯಾಯದ ದಾಳ ಉರುಳುವುದು ಉಳ್ಳವರ ಕಡೆಗೆ ಎಂಬ ಲಕ್ಕನ ಗ್ರಹಿಕೆಯು, ಆ ಬಗೆಯ ನ್ಯಾಯದ ಅಸ್ತಿತ್ವವನ್ನು ತಿರಸ್ಕರಿಸುವಂಥದೇ ಆಗಿದೆ. ಇದರಿಂದ ಅವನ ವ್ಯಕ್ತಿತ್ವ ಬಂಡಾಯದ ಆಶಯದಲ್ಲಿ ರೂಪುಗೊಳ್ಳುತ್ತಿದೆ ಎಂಬುದು ವ್ಯಕ್ತವಾಗುತ್ತದೆ. ಆದರೆ ಅದನ್ನು ಆತ ಹೊರಮೈಯಲ್ಲಿ ಮುಖಾಮುಖಿಯಾಗಿಸುವುದು ಕಷ್ಟವಿದೆ. ಯಾಕೆಂದರೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ತೀರ ಕೆಳಜಾತಿಯ, ಆರ್ಥಿಕವಾಗಿ ಏನೇನೂ ಭದ್ರತೆಯಿಲ್ಲದ ಆತ ಅನ್ಯಾಯದ ವಿರುದ್ಧವಾಗಿ ಎಲ್ಲ ಪ್ರತಿಭಟನೆಯನ್ನು ತನ್ನೊಳಗೇ ನಡೆಸಬೇಕಾಗಿದೆ." ಅಷ್ಟೇ ಅಲ್ಲದೆ ದರುಮನಹಳ್ಳಿಯ ಒಳ ವ್ಯವಹಾರಗಳು ಲಕ್ಕನಿಗೆ ಪೂರ್ಣವಾಗಿ ತಿಳಿದಿದ್ದರೂ ಅದನ್ನು ಆತ ಬಹಿರಂಗ ಪಡಿಸಲು ಹೆದರುತ್ತಾನೆ. ವಸ್ತು ಸ್ಥಿತಿಯ ಅರಿವು ಲಕ್ಕನಿಗಿದ್ದು ಪರಿಣಾಮವಾಗಿ ವಾಸ್ತವದ ಬಗೆಗಿನ ಆಕ್ರೋಶ ಅವನನ್ನು ಪೂರ್ಣ ಪ್ರಮಾಣದಲ್ಲಿ ಸ್ಫೋಟಿಸಲು ಸಿದ್ಧವಾಗಿಸುತ್ತದೆ. ಆದರೂ ಅಪಾಯಕಾರಿ ಘಟನೆಗಳು ಎದುರಾದಾಗ ತುಂಬಾ ಸಂಯಮದಿಂದ ನಿರ್ಲಿಪ್ತತೆಯಿಂದ ತಗ್ಗಿ ಬಗ್ಗಿ ಆ ಪ್ರಕ್ರಿಯೆಯನ್ನು ಸ್ವೀಕರಿಸುತ್ತಾನೆ.

ಇಂತಹ ಲಕ್ಕನಿಗೆ ರುಕ್ಮಿಣಿಯ ಮೇಲೆ ಮಾತೃಭಾವವಿದ್ದರೂ ರುಕ್ಮಿಣಿ ಪೂಜನೀಯ ವ್ಯಕ್ತಿಯಾದ್ದರಿಂದ ಆಕೆ ಮೈ ಮೇಲೆ ಬಿದ್ದಾಗ ಪ್ರತಿಭಟಿಸಲು ಸಾಧ್ಯವಾಗುವುದಿಲ್ಲ. ಗರ್ಭಿಣಿಯಾದ ರುಕ್ಮಿಣಿಗೆ ಔಷಧಿ ತಂದುಕೊಡುವಾಗ, ಊರಿನವರಿಗೆ ಸಿಕ್ಕಿಬಿದ್ದು ಛಡಿ ಏಟು ಮತ್ತು ಬಹಿಷ್ಕಾರದಂತಹ ಶಿಕ್ಷೆಗೆ ಒಳಗಾಗುತ್ತಾನೆ. ಬಹಿಷ್ಕಾರದ ನಂತರ ಶಕುನಿ ಕೊಪ್ಪಲಿನಲ್ಲಿ ಗೋಸುಸಾಬರ ಸಹಾಯದಿಂದ ಅವರ ಜಮೀನಿನಲ್ಲಿ ಗುಡಿಸಲು ಕಟ್ಟಿಕೊಂಡು, ಅಲ್ಲೇ ಅವರ ಸಹಾಯಕ್ಕೆ ನಿಲ್ಲುತ್ತಾನೆ. ಇದೇ ಸಂದರ್ಭದಲ್ಲಿ ಲಕ್ಕನ ತಾಯಿ ಕಲ್ಯಾಣಿಯ ನಿರ್ವಾಜ್ಯ ಮಾತೃಪ್ರೇಮವೂ ವ್ಯಕ್ತವಾಗುತ್ತದೆ. ಬಹಿಷ್ಕಾರಕ್ಕೆ ಒಳಗಾಗಿದ್ದ ಮಗನಿಗೆ ಒಂದು ಹೊತ್ತಿನ ಊಟದ ಕೊರತೆಯನ್ನು ತಪ್ಪಿಸಬೇಕೆಂಬ ಪ್ರೇಮದಿಂದ ಕಲ್ಯಾಣಿ ಪ್ರತಿನಿತ್ಯ ಸಂಜೆ ಸೊಪ್ಪು ಕುಯ್ಯುವ ನೆಪದಲ್ಲಿ ಊರಿನವರ ಕಣ್ಣು ತಪ್ಪಿಸಿ, ಮಗನಿಗೆ ಪ್ರಿಯವಾದ ರಾಗಿರೊಟ್ಟಿ ಉಳ್ಳಿ ಜುನುಕವನ್ನು ಬಿಸಿ ಆರಬಾರದೆಂಬ ಕಾರಣಕ್ಕೆ ಸೀರೆಯ ನೆರಿಗೆ ಮತ್ತು ಹೊಟ್ಟೆ ಭಾಗದ ಮಧ್ಯದಲ್ಲಿಟ್ಟು ಮಗನ ಹಸಿವನ್ನು ತಣಿಸುತ್ತಾಳೆ. ಇಂಥದೇ ಒಂದು ದಿನ ಪ್ಲೇಗಿನ ಪರಿಣಾಮವಾಗಿ ಮಗನಿಗೆ ರೊಟ್ಟಿ ತೆಗೆದುಕೊಂಡು ಹೋಗುವ ದಾರಿಮಧ್ಯೆ ಅಸುನೀಗುತ್ತಾಳೆ. ತಾಯಿಯನ್ನು ಕಲ್ಲುಸೇವೆ ಮಾಡುವ ಸಂದರ್ಭದಲ್ಲಿ ರೊಟ್ಟಿ ತಿನ್ನುವ ಆಸೆಯಿಂದ ಅವಳ ಸೀರೆಯ ನೆರಿಗೆಯನ್ನು ನಾಯಿ ಎಳೆದಾಗ ಅದನ್ನು ಸರಿಪಡಿಸಲು ಹೋಗುವ ಲಕ್ಕನಿಗೆ ಪ್ರತಿ ದಿನ ಬಿಸಿರೊಟ್ಟಿ ಇಡುತ್ತಿದ್ದ ಪರಿಣಾಮ ಕಲ್ಯಾಣಿಯ ಹೊಟ್ಟೆ ರೊಟ್ಟಿಯಗಲಕ್ಕೆ ಬೆಂದು ಹೋಗಿರುವುದು ಕಂಡು ಅತೀವ ದುಃಖವಾಗುತ್ತದೆ. ಈ ಘಟನೆ ತಾಯಿಪ್ರೇಮಕ್ಕಿಂತ ಮಿಗಿಲಾದದು ಯಾವುದೂ ಇಲ್ಲ ಎಂಬುದನ್ನು ಸೂಚಿಸುತ್ತದೆ.

ಕಾದಂಬರಿಯ ಕೊನೆಯ ಭಾಗದಲ್ಲಿ ಬಹಿಷ್ಕಾರದ ನಂತರ ಗೋಸುಸಾಬರ ಸಹಾಯದಿಂದ ಶಕುನಿ ಕೊಪ್ಪಲಿನಲ್ಲಿ ವಾಸಿಸುತ್ತಿದ್ದ ಲಕ್ಕ. ಅದನ್ನೂ ಬಿಟ್ಟು ಹೋಗುವಂತಹ ಕೆಲವು ಘಟನೆಗಳು ನಡೆದಾಗ ಶಕುನಿ ಕೊಪ್ಪಲನ್ನು ಬಿಟ್ಟು ಹೊಸಲೋಕವನ್ನರಸುತ್ತಾ ಹೊರಟು ಹೋಗುತ್ತಾನೆ. ಅವನಿಗೆ ಹೊಸ ಬದುಕಿನ ಸಾಧ್ಯತೆಗಳು ಕಂಡು ಬರುತ್ತವೆ. ಒಂದು ಹೊಸ ಆಶಯದೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

ಕಥೆಯ ಪ್ರಮುಖ ಘಟನೆಗಳನ್ನು ಹೊರತು ಪಡಿಸಿ ನೋಡಿದಾಗ ಕಾದಂಬರಿಯಲ್ಲಿ ವ್ಯಕ್ತವಾಗುವ ಗ್ರಾಮೀಣ ಸಮಾಜದ ಬದುಕಿನ ವಿವರಗಳು ಪದರು ಪದರುಗಳಾಗಿ ಬಿಚ್ಚಿಕೊಳ್ಳುವುದನ್ನು ಗಮನಿಸಬಹುದು.

- ಒಂದೆಡೆ ಜಾತಿಪದ್ಧತಿಯ ಕರಾಳ ಆಚರಣೆ
- ಜೀತಪದ್ಧತಿ ಜೀವಂತವಾಗಿರುವುದು
- ಕಲ್ಲು ಸೇವೆಯಂಥ ವಿಶಿಷ್ಟವಾದ ಶವಸಂಸ್ಕಾರ ಅವರ ಆಚರಣೆಯೊಂದರ ಮಹತ್ವವನ್ನು ತಿಳಿಸುತ್ತದೆ.
- ಹಳ್ಳಿಗರ ಧಾರ್ಮಿಕತೆಗೆ ಸೂಚಕವಾಗಿ ಮಠದಯ್ಯ, ಅವದೂತಪ್ಪನ ಪಾತ್ರಗಳು ಕಾದಂಬರಿಯಲ್ಲಿ ಮೈತಾಳಿವೆ.

- ಒಡವೆ ಆಸೆಗೆ ನಂಜೇಗೌಡನೇ ಬೆಳೆಸಿದ ಆತನ ಚೇಲಾಗಳು ಒಡವೆಗಳೊಂದಿಗೆ ಮಣ್ಣು ಮಾಡಿದ್ದ ಗೌರಮ್ಮನ ಸಮಾಧಿಯನ್ನು ಮಧ್ಯರಾತ್ರಿ ಅಗೆದು ಒಡವೆಗಳನ್ನು ಕದಿಯುವ ಕಳ್ಳತನಗಳೂ ಇಲ್ಲಿವೆ.
- ರುಕ್ಮಿಣಿ ಲಕ್ಕನ ಜೊತೆ ಸಂಬಂಧ ಹೊಂದಿದ್ದ ಮಾತ್ರಕ್ಕೆ ಆಕೆಯನ್ನು ಬಹಿಷ್ಕರಿಸುವ ಕೇಶವಯ್ಯ ಮತ್ತು ಇತರರು, ಕೇಶವಯ್ಯ ಹೊಲೆಯರ ಸಿವುನಿ ಜೊತೆ ಸಂಬಂಧ ಹೊಂದಿದಾಗ ತಪ್ಪಾಗಿ ಭಾಸವಾಗುವುದಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಎಲ್ಲಾ ಕಟ್ಟಳೆಗಳು ಮಹಿಳೆಯರಿಗೇ ಮೀಸಲಾಗಿರುವುದು ಒಂದಾದರೆ ಕೆಳಜಾತಿಯ ಹೆಣ್ಣುಮಕ್ಕಳನ್ನು ಉತ್ತಮ ಜಾತಿಯ ಪುರುಷರು ಲೈಂಗಿಕವಾಗಿ ನಡೆಸಿಕೊಳ್ಳುತ್ತಿದ್ದ ಅಮಾನುಷತೆಯೂ ಚಿತ್ರಿತವಾಗಿದೆ.
- ಗ್ರಾಮೀಣ ಸಮಾಜದಲ್ಲಿಯೂ ಪುರುಷ ಪ್ರಧಾನ ವ್ಯವಸ್ಥೆಯ ಆಚರಣೆಗೆ ರುಕ್ಮಿಣಿ ಬಲಿಪಶುವಾಗುವ ಚಿತ್ರಣ ಒಂದೆಡೆಯಿದ್ದರೆ, ನಂಜೇಗೌಡನ ಹೆಂಡತಿ ಗೌರಮ್ಮ, ಲಕ್ಕನ ತಂಗಿ ಸಿವುನಿ ಮತ್ತೊಂದೆಡೆ ಕಾಣಸಿಗುತ್ತಾರೆ. ನಂಜೇಗೌಡನ ಚಿಕ್ಕಪ್ರಾಯದ ಎರಡನೇ ಹೆಂಡತಿ ಗೌರಮ್ಮ ಗಂಡನ ಅನುಮಾನ ಸ್ವಭಾವದ ಕಾರಣದಿಂದ ಸದಾ ಹೊಡೆತ ತಿಂದು ದೌರ್ಜನ್ಯಕ್ಕೆ ಒಳಗಾದರೆ, ಕಾಮದ ಹಸಿವು ಮತ್ತು ಹೊಟ್ಟೆಯ ಹಸಿವಿನ ಕಾರಣದಿಂದ ಸಿವುನಿ ಬ್ರಾಹ್ಮಣ ಕೇಶವಯ್ಯನಿಂದ ದೌರ್ಜನ್ಯಕ್ಕೆ ಒಳಗಾಗುತ್ತಾಳೆ.

ಕಾದಂಬರಿಯ ಅಂತ್ಯದಲ್ಲಿ ಚಿತ್ರಮೂಲನ ಕೋಟೆಯಲ್ಲಿ ರುಕ್ಮಿಣಿ ಬಂಧಿತಳಾಗಿದ್ದಿರಬಹುದಾದ ಸೂಚನೆಯಷ್ಟೇ ಲಕ್ಕನ ಬದುಕಿನ ಸ್ಥಿತ್ಯಂತರದ ಸೂಚನೆಯೂ ಧ್ವನಿ ಪೂರ್ಣವಾಗುತ್ತದೆ. ಪ್ಲೇಗಿನ ಪೀಡನೆಗೆ ಒಳಗಾಗುವ ದರುಮನಹಳ್ಳಿಯನ್ನು ಬಿಟ್ಟು ಹೊರಡುವ ಲಕ್ಕನ ಅನುಭವಗಳು ಹೊಸ ಬದುಕಿನ ಸೂಚನೆಗಳನ್ನು ಮತ್ತು ಸಾಧ್ಯತೆಗಳನ್ನು ಧ್ವನಿಸುತ್ತದೆ. ಕಾದಂಬರಿಯಲ್ಲಿ ಮೇಲುನೋಟಕ್ಕೆ ವ್ಯಕ್ತವಾಗುವ ಜಗತ್ತು ವೈದೃಶ್ಯಗಳ ಮೂಲಕವಾಗಿ ಭಗ್ನಗೊಂಡಂತೆ ತೋರುವುದಾದರೂ ಆಂತರ್ಯದಲ್ಲಿ ಹೊಸ ಬದುಕಿನ ಸಾಧ್ಯತೆಗಳನ್ನು ಕನಸುತ್ತದೆ."2

ಒಟ್ಟಾರೆಯಾಗಿ ಗ್ರಾಮೀಣ ಸಮಾಜದ ದಟ್ಟ ಚಿತ್ರಣ ಹಾಗೂ ಮನುಷ್ಯ ಸ್ವಭಾವಗಳ ಮೇಲಾಟದಲ್ಲಿನ ಮೂಲ ಕಾಮನೆಗಳ ಶೋಷಣೆಯ ಪ್ರವೃತ್ತಿಯ ಸೂಕ್ಷ್ಮಾತಿಸೂಕ್ಷ್ಮ ಅಭಿವ್ಯಕ್ತಿ ಮತ್ತು ವಿಶ್ಲೇಷಣೆ ಈ ಕಾದಂಬರಿಯ ಮುಖ್ಯ ಲಕ್ಷಣವಾಗಿದೆ. ಹಳೆಯ ಮೈಸೂರಿನ ಗ್ರಾಮೀಣ ಸಂಸ್ಕೃತಿಯನ್ನು ಚದುರಂಗರು ಕಾದಂಬರಿಯಲ್ಲಿ ಆಳವಾಗಿ ಶೋಧಿಸಿದ್ದಾರೆ. ಹಳ್ಳಿಯ ಸಾಮಾಜಿಕ ಜೀವನ, ಗ್ರಾಮ ಸಮಾಜದಲ್ಲಿನ ವಿವಿಧ ಬಗೆಯ ಶೋಷಣೆಗಳು ಕಣ್ಣಿಗೆ ರಾಚುತ್ತವೆ. ಶೋಷಿತರ ದಯನೀಯ ಬದುಕು ನಮ್ಮ ಸಂವೇದನೆಯನ್ನೇ ಘಾತಿಗೊಳಿಸುತ್ತದೆ.ಹಲವು ರೀತಿಯ ಮಾನಸಿಕ ಸಂಘರ್ಷಗಳು, ಸಾಮಾಜಿಕ ಮೌಢ್ಯತೆಯ ಪ್ರತಿಬಿಂಬವಾಗಿ ನಮ್ಮ ವಿವೇಕಕ್ಕೆ ಕವಿದಿರುವ ಮಸುಕನ್ನು ದೂರ ಮಾಡಲು ಪೂರಕವಾಗಿದೆ.

ಕಾದಂಬರಿಯಲ್ಲಿ ಗಂಡುಹೆಣ್ಣಿನ ಸಂಬಂಧದ ಅನೇಕ ಪ್ರಕಾರಗಳ ಚಿತ್ರಣವಿದೆಯಾದರೂ ಇಲ್ಲಿ ವಿವಾಹ, ಪ್ರೇಮ ಮತ್ತು ಲೈಂಗಿಕ ಸಂಬಂಧಗಳು ಮುಖ್ಯ ವಸ್ತುವಲ್ಲ. ಅದೇ ರೀತಿ ಒಂದು ಹಳ್ಳಿಯ ಸಾಮಾಜಿಕ ಜೀವನದ ಅನೇಕ ಮುಖಗಳನ್ನು ಕಾದಂಬರಿ ತೆರೆದು ತೋರಿಸುತ್ತದೆ. ವೈಶಾಖ ಕಾದಂಬರಿಯ ಮುಖ್ಯ ವಸ್ತು ಒಬ್ಬ ದಲಿತನ ಪ್ರಜ್ಞೆಯ ವಿಕಾಸ ಮತ್ತು ಆತ ತನ್ನ ಕಳೆದು ಹೋದ ನಿಷ್ಪಾಪ ಅವಸ್ಥೆಯನ್ನು ಮರಳಿ ದೊರಕಿಸಲು ನಡೆಯಿಸುವ ಪ್ರಯತ್ನವಾಗಿದೆ.

**ಟಿಪ್ಪಣಿಗಳು**

1. ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ-ಡಾ. ಎನ್.ಕೆ, ಕೋದಂಡರಾಮ, ಪುಟ-146
2. ಸಾಲು ದೀಪಗಳು -ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ- 342

**ಪರಾಮರ್ಶನ ಗ್ರಂಥಗಳು**

1. ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ
   ಡಾ. ಎನ್.ಕೆ, ಕೋದಂಡರಾಮ
   ರೂಪ ಪ್ರಕಾಶನ, ಮೈಸೂರು
2. ಲೇಖನ: ಚದುರಂಗ - ಎನ್.ಬಿ. ಚಂದ್ರಮೋಹನ್
   ಸಾಲು ದೀಪಗಳು
   ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು